# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1173(1448) |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ 2024 ಮತ್ತು 2025ನೇ ಸಾಲಿನಲ್ಲಿ ನಿವೃತ್ತರಾದ ನೌಕರರ ಸಂಖ್ಯೆ ಎಷ್ಟು;</td><td>• ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ನಿವೃತ್ತರಾದ ಸರ್ಕಾರಿ ನೌಕರರ ಸಂಖ್ಯೆ ಈ ಕೆಳಗಿನಂತಿದೆ:<br><br>2024ನೇ ಸಾಲಿನಲ್ಲಿ – 8379<br>2025ನೇ ಸಾಲಿನಲ್ಲಿ – 9443<br><br>• ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದ ನೌಕರರ ಅಂದಾಜು ಸಂಖ್ಯೆ ಈ ಕೆಳಗಿನಂತಿದೆ:<br><br>2024-25ನೇ ಸಾಲಿನಲ್ಲಿ - 2731<br>2025-26ನೇ ಸಾಲಿನಲ್ಲಿ - 2990</td></tr>
<tr><td>ಆ)</td><td>ಹಲವು ನೌಕರರು ನಿವೃತ್ತರಾಗಿ ತಿಂಗಳುಗಳೇ ಕಳೆದರೂ, ಅವರ ಹಕ್ಕಿನಲ್ಲಿ ಇರುವ ಗಳಿಕೆ ರಜೆ ಅಧ್ಯರ್ಪಿಸಿ ನಗದೀಕರಣ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಎಷ್ಟು ನೌಕರರಿಗೆ ಗಳಿಕೆ ರಜೆ ನಗದೀಕರಣ ಸೌಲಭ್ಯ ನೀಡಿರುವುದಿಲ್ಲ.</td><td>ಬಂದಿದೆ.<br><br>ನಿವೃತ್ತರಾಗಿರುವ ನೌಕರರುಗಳ ಮೇಲೆ ಶಿಸ್ತು ಪ್ರಕರಣ/ನ್ಯಾಯಾಲಯ ಪ್ರಕರಣ/ಬೇ-ಬಾಕಿ ಇರುವುದರಿಂದ/ ಮಹಾಲೇಖಪಾಲರಿಂದ ಗಳಿಕೆ ರಜೆ ಮಾಹಿತಿ ಮತ್ತು ಬೇಬಾಕಿ ಸ್ವೀಕೃತವಾಗದ ಕಾರಣ ಗ್ರೂಪ ಎ ವೃಂದದ ಅಧಿಕಾರಿಗಳಿಗೆ ಮತ್ತು ಗ್ರೂಪ್-ಬಿ ವೃಂದದ 11 ಬೋಧಕ ಅಧಿಕಾರಿಗಳ ನಿವೃತ್ತಿ ನಂತರ ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ನೀಡಿರುವುದಿಲ್ಲ.</td></tr>
<tr><td>ಇ)</td><td>ಹಲವು ಡಯಟ್ ಪ್ರಾಂಶುಪಾಲರು ಅನುದಾನ ಬಿಟುಗಡೆ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆಯೇ; ಬರೆದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು;</td><td rowspan="2">ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆಗಳ ನೌಕರರಿಗೆ ನಿವೃತ್ತಿ ಪೂರ್ವ ಹಕ್ಕಿನಲ್ಲಿರುವ ಗಳಿಕೆ ರಜೆ ನಗದೀಕರಣಕ್ಕಾಗಿ ಅನುದಾನ ಬಿಡುಗಡೆಮಾಡಲು ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬೆಂಗಳೂರು ಇವರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಪ್ರಸ್ತುತ ಪರಿಶೀಲನೆಯಲ್ಲಿರುತ್ತದೆ.</td></tr>
<tr><td>ಈ)</td><td>ಯಾವ ಕಾಲಮಿತಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದು?</td></tr>
</table>

ಸಂಖ್ಯೆ:ಇಪಿ 91 ಎಸ್ ಟಿಬಿ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.